ಆ) ಸದರೀ ಯೋಜನೆಗಾಗಿ ಪ್ರಥಮ ಹಂತ ಹಾಗೂ ದ್ವಿತೀಯ ಹಂತದ ಯೋಜನೆಗೆ ಮಂಜೂರಾದ ಹಣಎಷ್ಟು ;

ಇ) ಈ ಯೋಜನೆಗಾಗಿ ರೈತರು ಕಳೆದುಕೊಂಡ ಜಮೀನುಗಳ ಪರಿಹಾರ ಮೊತ್ತವೆಷ್ಟು; ಈ ಪೈಕಿ ರೈತರಿಗೆ ನೀಡಿದ ಪರಿಹಾರ ಮೊತ್ತ ಎಷ್ಟು ಹಾಗೂ ಬಾಕಿ ಇರುವ ಮೊತ್ತ ಎಷ್ಟು ಮೊತ್ತವನ್ನು ಇದುವರೆಗೂ ಪಾವತಿ ಮಾಡದೇ ಇರಲು ಕಾರಣಗಳೇನು; ಯಾವಾಗ ಬಾಕಿ ಮೊತ್ತವನ್ನು ಪಾವತಿ ಮಾಡಲಾಗುವುದು ?

ಶ್ರೀ ಎಂ. ಬಿ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಹಾವೇರಿ ಜಿಲ್ಲೆ ಬ್ಯಾಡಗಿ ತಾಲೂಕಿನ ಗುಡ್ಡದ ಮಲ್ಲಾಪುರ ಏತ ನೀರಾವರಿ ಯೋಜನೆಯನ್ನು 2005–06ನೇ ಸಾಲಿನಲ್ಲಿ ಪ್ರಾರಂಭಿಸಲಾಗಿರುತ್ತದೆ.

ಆ) ಈ ಯೋಜನೆಗೆ ಎರಡೂ ಹಂತಗಳಿಗೆ ಸೆರಿದಂತೆ ₹. 115.40 ಕೋಟಿಗಳ ಅಂದಾಜಿಗೆ ಅನುಮೋದನೆ ದೊರೆತಿರುತ್ತದೆ.

ಇ) ಈ ಯೋಜನೆಗಾಗಿ ಇದುವರೆಗಿನ ಭೂಸ್ವಾಧೀನ ಪ್ರಕರಣಗಳಲ್ಲಿ ರೈತರು ಕಳೆದುಕೊಂಡ ಜಮೀನುಗಳ ಪರಿಹಾರ ಮೊತ್ತ ₹. 859.00 ಲಕ್ಷಗಲಾಗಿದ್ದು, ಇದುವರೆಗೆ ₹..186.00 ಲಕ್ಷಗಳನ್ನು ಪಾವತಿಸಲಾಗಿದೆ. ಹಾಗೂ ₹. 673.00 ಲಕ್ಷಗಳು ಪಾವತಿಗಾಗಿ ಬಾಕಿ ಇರುತ್ತದೆ. ಕೆಲವು ಪ್ರಕರಣಗಳು ಅವಾರ್ಡ್ ಹಂತದಲ್ಲಿರುವುದರಿಂದ ಅವುಗಳು ಅನುಮೋದನೆ ಬಳಿಕ ಹಂತ ಹಂತವಾಗಿ ಪಾವತಿಸಲು ಕ್ರಮ ಜರುಗಿಸಲಾಗುವುದು.

ಕಾಲುವೆ ಕಾಮಗಾರಿ ಯೋಜನೆ

202 (539); ಶ್ರೀ ನೀಲಪ್ಪ ಶಿವಣ್ಣನವರ್ (ಬ್ಯಾಡಗಿ)

ಅ) ಹಾವೇರಿ ಜಿಲ್ಲೆ ಬ್ಯಾಡಗಿ ತಾಲೂಕಿನ ಗುಡ್ಡದಮಲ್ಲಾಪುರ ಏತ ನೀರಾವರಿ ಯೋಜನೆಯ ಕಾಮಗಾರಿಯು ಕಳಪೆ ಮಟ್ಟ

ದ್ದಾಗಿರುವುದರಿಂದ ಕಾಲುವೆ ಒಡೆದು ರೈತರ ಬೆಳೆಗಳಿಗೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಕಾಮಗಾರಿಯನ್ನು ನಿರ್ವಹಿಸಿದ ಗುತ್ತಿಗೆದಾರರ ಮೇಲೆ ಕೈಗೊಂಡ ಕ್ರಮಗಳೇನು (ಪೂರ್ಣ ವಿವರ ಒದಗಿಸುವುದು)

ಇ) ಕಾಲುವೆ ಒಡೆದು ಹಾಳಾದ ರೈತರ ಬೇಳೆಗಳ ಹಾನಿಗೆ ಪರಿಹಾರ ನೀಡಲಾಗಿದೆಯೇ; ಹಾಗಿದ್ದಲ್ಲಿ ಪರಿಹಾರ ಮೊತ್ತವೆಷ್ಟು (ವಿವರಗಳನ್ನು ಒದಗಿಸುವುದು) ?

ಶ್ರೀ ಎಂ . ಬಿ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಗುಡ್ಡದಮಲ್ಲಾಪುರ ಏತನೀರಾವರಿ ಯೋಜನೆಯು ಇನ್ನೂ ನಿರ್ಮಾಣ ಹಂತದಲ್ಲಿದ್ದು ಕಾಮಗಾರಿಗಳು ಪೂರ್ಣಗೊಂಡಿರುವುದಿಲ್ಲ. ಹಾಗೂ ನಾಲೆಗಳಲ್ಲಿ ಇನ್ನೂ ನೀರನ್ನು ಹರಿಸಿರುವುದಿಲ್ಲ. ಮಳೆಗಾಲದಲ್ಲಿ ಬಿದ್ದ ಅಧಿಕ ಮಳೆಯ ಕಾರಣದಿಂದ ಮತ್ತು ಕೆಲವು ರೈತರು ಕಾಲುವೆಯನ್ನು ಒತ್ತುವರಿ ಮಾಡಿಕೊಂಡು ಮಣ್ಣಿನ ಏರಿಯನ್ನು ಲೈನಿಂಗ್ ಭಾಗದವರೆಗೆ ಕಡಿದು ಏರಿಯನ್ನು ಕಿರಿದು ಮಾಡಿರುವ ಕಾರಣದಿಂದ; ಕಾಲುವೆಯಲ್ಲಿ ಸಂಗ್ರಹವಾದ ಮಳೆನೀರು ಸರಾಗವಾಗಿ ಹರಿದು ಹೋಗಲು ಅವಕಾಶ ಇಲ್ಲದೇ ಇದ್ದುದರಿಂದ ಏರಿ ಕಿರಿದಾಗಿರುವ ಭಾಗದಲ್ಲಿ ನೀರಿನ ಒತ್ತಡದಿಂದಾಗಿ ಕೆಲವು ಭಾಗಗಳಲ್ಲಿ ಕಾಲುವೆ ಏರಿ ಮೇಲೆ ನೀರು ಹರಿದು ಏರಿಯ ಭಾಗವು ಅಲ್ಲಲ್ಲಿ ಹಾಳಾಗಿರುತ್ತದೆ.

ಆ) ಕಾಮಗಾರಿಗಳು ಇನ್ನೂ ಪ್ರಗತಿಯಲ್ಲಿರುವುದರಿಂದ ಏರಿಯು ಹಾಳಾಗಿರುವ ಭಾಗವನ್ನು ಸರ್ಕಾರಕ್ಕೆ ಯಾವುದೇ ಹೊರೆಯಿಲ್ಲದೇ ಸರಿಪಡಿಸಲು ಗುತ್ತಿಗೆದಾರರಿಗೆ ನಿರ್ದೇಶನಗಳನ್ನು ನೀಡಲಾಗಿದ್ದು ಆ ಭಾಗವನ್ನು ಸುಸ್ಥಿತಿಗೆ ತರಲು ಅವಶ್ಯಕ ಕ್ರಮಗಳನ್ನು ಜರುಗಿಸಲಾಗುತ್ತಿದೆ.

ಇ) ಬೆಳೆಗಳ ಹಾನಿ ಕುರಿತಂತೆ ಮೊತ್ತವನ್ನು ಕಂದಾಯ ಇಲಾಖೆಯ ಅಧಿಕಾರಿಗಳ ಸಹಯೋಗದೊಂದಿಗೆ ಪರಿಶೀಲಿಸಿ ರೂ. 38,950.00 ಗಳೆಂದು ಅಂದಾಜಿಸಲಾಗಿದೆ. ಈ ಪರಿಹಾರ ವಿತರಣೆ ಕುರಿತಂತೆ ಕಂದಾಯ ಇಲಾಖೆಯವರೊಂದಿಗೆ ವ್ಯವಹರಿಸಿ ಪರಿಹಾರವನ್ನು ಅಂತಿಮಗೊಳಿಸಿಕೊಂಡು ಕ್ರಮ ಜರುಗಿಸಲಾಗುವುದು.

ಸಣ್ಣ ನೀರಾವರಿ ಯೋಜನೆಗಳು

203(540); ಶ್ರೀ ಬಸವರಾಜ್ ನಿಲಪ್ಪ ಶಿವಣ್ಣನವರ್

ಅ) ರಾಜ್ಯದಲ್ಲಿರುವ ಸಣ್ಣ ನೀರಾವರಿ ಇಲಾಖೆಗೆ ಸಂಬಂಧಪಟ್ಟ ಕೆರೆಗಳ ಸಂಖ್ಯೆ ಎಷ್ಟು ;

ಆ) ಸದರಿ ಕೆರೆಗಳನ್ನು ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಒತ್ತುವರಿಯಾದ ಕೆರೆಗಳ ಸಂಖ್ಯೆ ಎಷ್ಟು; ಒತ್ತುವರಿಯನ್ನು ತೆರೆವುಗೊಳಿಸಿ ಅವುಗಳ (ಹದ್ದುಬಸ್ತು) ವಿಸ್ತೀರ್ಣ ಗುರುತಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

ಈ) ಒತ್ತುವರಿಯನ್ನು ತೆರೆವುಗೊಳಿಸಲು ಸಾಧ್ಯವಾಗಿಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಶಿವರಾಜ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು)

ಅ) ರಾಜ್ಯದಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ 3622 ಕೆರೆಗಳಿರುತ್ತವೆ.

ಆ) ಬಂದಿದೆ

ಇ) ಒತ್ತುವರಿಯಾದ ಕೆರೆಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ. ಕಂದಾಯ ಮತ್ತು ಪೋಲಿಸ್ ಇಲಾಖೆಗಳ